29-1-2021

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 25 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 04-02-2021 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ನಿರ್ಭಯ ಯೋಜನೆಯಡಿ ರಾಜ್ಯದಲ್ಲಿ ಮಹಿಳೆಯರಿಗೆ ಸುರಕ್ಷತೆ ಮತ್ತು ಭದ್ರತೆ ಒದಗಿಸಲು ಕೇಂದ್ರ ಸರ್ಕಾರದಿಂದ ಕಳೆದ 5 ವರ್ಷಗಳಿಂದ ಪಡೆದಿರುವ ಅನುದಾನವೆಷ್ಟು; | ಕಳೆದ 5 ವರ್ಷಗಳಿಂದ **ಒಳಾಡಳಿತ ಇಲಾಖೆಗೆ** ನಿರ್ಭಯ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ಒದಗಿಸಲಾದ ಅನುದಾನದ ವಿವರ ಕೆಳಕಂಡಂತಿರುತ್ತದೆ. |

| ವರ್ಷ | ಒಳಾಡಳಿತ ಇಲಾಖೆಗೆ ಕೇಂದ್ರ ಸರ್ಕಾರದಿಂದ ಒದಗಿಸಲಾದ ಅನುದಾನ (ರೂ.ಕೋಟಿಗಳಲ್ಲಿ) |
|---|---|
| 2015-16 | - |
| 2016-17 | - |
| 2017-18 | - |
| 2018-19 | - |
| 2019-20 | 167.26 |
| 2020-21 | 18.42 |
| **ಒಟ್ಟು ರೂ.** | **185.68** |

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ** ನಿರ್ಭಯ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ಒನ್ ಸ್ಟಾಪ್ ಸೆಂಟರ್(ಸಖಿ) ಯೋಜನೆ ಅನುಷ್ಠಾನಕ್ಕಾಗಿ ಒದಗಿಸಲಾದ ಅನುದಾನದ ವಿವರ ಕೆಳಕಂಡಂತಿದೆ.

| ವರ್ಷ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಕೇಂದ್ರ ಸರ್ಕಾರದಿಂದ ಒದಗಿಸಲಾದ ಅನುದಾನ (ರೂ. ಲಕ್ಷಗಳಲ್ಲಿ) | ಷರಾ |
|---|---|---|
| 2015-16 | 45.87 | ಅನುದಾನವನ್ನು ಕೇಂದ್ರ ಸರ್ಕಾರದಿಂದ ನೇರವಾಗಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಪನಿರ್ದೇಶಕರ ಜಂಟಿ ಖಾತೆಗೆ ಪಿಎಫ್‌ಎಂಎಸ್ ಮುಖಾಂತರ ಬಿಡುಗಡೆ ಮಾಡಲಾಗುತ್ತದೆ. |
| 2016-17 | 31.44 | |
| 2017-18 | 127.42 | |
| 2018-19 | 544.91 | |
| 2019-20 | 546.91 | |
| 2020-21 | 352.43 | |
| **ಒಟ್ಟು ರೂ.** | **1,648.98** | |

181 ಮಹಿಳಾ ಸಹಾಯವಾಣಿಗಾಗಿ ನಿರ್ಭಯ ಯೋಜನೆಯಡಿ ಕೇಂದ್ರ ಸರ್ಕಾರದಿಂದ 2015-16ನೇ ಸಾಲಿನಲ್ಲಿ ರೂ.62.70 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

<table>
<tr>
<td>(ಆ)</td>
<td>ಈ ಅನುದಾನವನ್ನು ರಾಜ್ಯದ ಮಹಿಳಾ ಸುರಕ್ಷತೆ ಮತ್ತು ಭದ್ರತೆ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾಗಿದೆಯೇ; (ಇಲಾಖಾವಾರು ಮತ್ತು ಕಾರ್ಯಕ್ರಮವಾರು ಸಂಪೂರ್ಣ ವಿವರ ಒದಗಿಸುವುದು).</td>
<td>

<u>ಒಳಾಡಳಿತ ಇಲಾಖೆಗೆ ಸಂಬಂಧಿಸಿದ ಮಾಹಿತಿ:</u>

1. ಕೇಂದ್ರ ಸರ್ಕಾರದ ನಿರ್ಭಯ ನಿಧಿ ಅಡಿ ಬೆಂಗಳೂರು ನಗರದಲ್ಲಿ ಸೇಫ್ ಸಿಟಿ ಪ್ರಾಜೆಕ್ಟ್ ಫಾರ್ ಸೇಫ್ಟಿ ಆಫ್ ವುಮೆನ್ ಯೋಜನೆಯ ಅನುಷ್ಠಾನ ಕುರಿತು **ಒಟ್ಟು ರೂ.667 ಕೋಟಿಗಳ** ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಲ್ಲಿ ಕೇಂದ್ರ ಸರ್ಕಾರದ ಪಾಲು(60%) ರೂ.400.20 ಕೋಟಿಗಳು ಮತ್ತು ರಾಜ್ಯ ಸರ್ಕಾರದ ಪಾಲು(40%) ರೂ.266.80 ಕೋಟಿಗಳು ಮಂಜೂರಾಗಿರುತ್ತದೆ.
2. ಸದರಿ ಯೋಜನೆಯನ್ನು ಬೆಂಗಳೂರು ನಗರದಲ್ಲಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಇವರು ಅನುಷ್ಠಾನಗೊಳಿಸುವ ಪ್ರಾಧಿಕಾರವಾಗಿರುತ್ತಾರೆ.
3. ಈ ಅನುದಾನವನ್ನು ರಾಜ್ಯದ ಮಹಿಳಾ ಸುರಕ್ಷತೆ ಮತ್ತು ಭದ್ರತೆ ಕಾರ್ಯಕ್ರಮಗಳಿಗೆ ಬೆಂಗಳೂರು ನಗರದಲ್ಲಿ ಸೇಫ್ ಸಿಟಿ ಪ್ರಾಜೆಕ್ಟ್ ಫಾರ್ ಸೇಫ್ಟಿ ಆಫ್ ವುಮೆನ್ ಅನ್ನು ಅನುಷ್ಠಾನಗೊಳಿಸಲು 2019–20ನೇ ಸಾಲಿನಲ್ಲಿ ಒಟ್ಟು ರೂ.208.05 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
4. ಈ ಯೋಜನೆಯ ಯೋಜನಾ ಮೇಲ್ವಿಚಾರಣಾ ಸಮಾಲೋಚಕರಾಗಿ (Project Monitoring Consultants (PMC) M/s Ernst & Young LLP ಸಂಸ್ಥೆಯನ್ನು ಆಯ್ಕೆ ಮಾಡಿದ್ದು, ಇವರಿಗೆ ರೂ.0.72 ಕೋಟಿಗಳನ್ನು ಯೋಜನಾ ಮೇಲ್ವಿಚಾರಣಾ ಸಮಾಲೋಚಕರ ಕಾರ್ಯನಿರ್ವಹಣೆಗೆ ಪಾವತಿಸಲಾಗಿರುತ್ತದೆ.
5. ಸದರಿ ಸಂಸ್ಥೆಯವರು ತಯಾರಿಸಿದ RFP(Request for Proposal) ರನ್ವಯ 02 ಬಾರಿ ಟೆಂಡರ್ ಆಹ್ವಾನಿಸಲಾಗಿದ್ದು, ಮೊದಲನೇ ಟೆಂಡರ್‌ನಲ್ಲಿ ಯಾವುದೇ ಬಿಡ್‌ದಾರರು ಅರ್ಹರಿಲ್ಲದ ಕಾರಣದಿಂದಾಗಿ ಹಾಗೂ ಚೀನಾ ದೇಶದ ಉತ್ಪನ್ನಗಳ ಮೇಲೆ ನಿರ್ಬಂಧವಿದ್ದ ಕಾರಣ ಎರಡನೇ ಟೆಂಡರ್ ಪ್ರಕ್ರಿಯೆಯು ರದ್ದುಗೊಂಡಿರುತ್ತದೆ. ಪ್ರಸ್ತುತ 3ನೇ ಬಾರಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
6. ರಾಜ್ಯದ ಮಹಿಳಾ ಸುರಕ್ಷತೆ ಮತ್ತು ಭದ್ರತೆ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರವು ನಿರ್ಭಯ ಯೋಜನೆ ಅಡಿಯಲ್ಲಿ ರಾಜ್ಯದ ಪ್ರತಿ ಪೊಲೀಸ್ ಠಾಣೆಯಲ್ಲಿ ಮಹಿಳಾ ಹೆಲ್ಪ್ ಡೆಸ್ಕ್ ಅನ್ನು ಸ್ಥಾಪಿಸಲು ಪ್ರತಿ ಪೊಲೀಸ್ ಠಾಣೆಗೆ ರೂ. 1.00 ಲಕ್ಷಗಳಂತೆ, 700 ಪೊಲೀಸ್ ಠಾಣೆಗಳಿಗೆ ಒಟ್ಟು ರೂ.700 ಲಕ್ಷಗಳ ಅನುದಾನವನ್ನು ಕೇಂದ್ರ ಸರ್ಕಾರದಿಂದ ಹಂಚಿಕೆ ಮಾಡಲಾಗಿದ್ದು, ಸದರಿ ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 59 ಪಿಓಪಿ 2020, ದಿನಾಂಕ:03/07/2020ರಲ್ಲಿ ಬಿಡುಗಡೆ ಮಾಡಲಾಗಿರುತ್ತದೆ.
7. ಸದರಿ ಅನುದಾನದಲ್ಲಿ ಪೊಲೀಸ್ ಠಾಣೆಯಲ್ಲಿ ಮಹಿಳಾ ಹೆಲ್ಪ್ ಡೆಸ್ಕ್ ಸ್ಥಾಪಿಸಲು ಈಗಾಗಲೇ ಕ್ರಮ ಕೈಗೊಂಡಿದ್ದು, ಘಟಕಾಧಿಕಾರಿಗಳು ಈ ಅನುದಾನವನ್ನು ಸಂಪೂರ್ಣವಾಗಿ ಮಹಿಳಾ ಹೆಲ್ಪ್ ಡೆಸ್ಕ್‌ಗಳನ್ನು ಸ್ಥಾಪಿಸಲು ಬಳಸಿಕೊಳ್ಳಲಾಗಿದ್ದು, ವಿವರ ಕೆಳಕಂಡಂತಿದೆ.

| ಬಿಡುಗಡೆಯಾದ ಅನುದಾನ (ಕೋಟಿಗಳಲ್ಲಿ) | ಬಳಕೆಯಾದ ಅನುದಾನ (ಕೋಟಿಗಳಲ್ಲಿ) (ದಿನಾಂಕ : 28/01/2021 ರವರೆಗೆ) | ಬಳಕೆಯಾಗಲಿರುವ ಅನುದಾನ (ಕೋಟಿಗಳಲ್ಲಿ) |
|---|---|---|
| 7.00 | 6.77 | 0.23 |

</td>
</tr>
</table>

8. ಅದೇ ರೀತಿಯಾಗಿ ರಾಜ್ಯದಲ್ಲಿ ಮಾನವ ಅಕ್ರಮ ಕಳ್ಳಸಾಗಣೆಯನ್ನು ತಡೆಗಟ್ಟಲು ಸ್ಥಾಪಿಸಿರುವ 30 ಮಾನವ ಕಳ್ಳಸಾಗಾಣಿಕೆ ತಡೆ ಘಟಕಗಳನ್ನು ಸೃಜಿಸಲು/ ಬಲಪಡಿಸಲು ನಿರ್ಭಯ ಯೋಜನೆ ಅಡಿಯಲ್ಲಿ ರೂ.388.00 ಲಕ್ಷಗಳ ಅನುದಾನವನ್ನು ಕೇಂದ್ರ ಸರ್ಕಾರವು ಹಂಚಿಕೆ ಮಾಡಿದ್ದು, ಸದರಿ ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 70 ಇಎಫ್‌ಎಸ್ 2020, ದಿನಾಂಕ:14/09/2020ರಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನವನ್ನು ಸಹ ಘಟಕಾಧಿಕಾರಿಗಳಿಗೆ ನೀಡಿದ್ದು, ಮಾನವ ಕಳ್ಳಸಾಗಾಣೆ ತಡೆ ಘಟಕಗಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅವಶ್ಯವಿರುವ ವಾಹನ, ಕಂಪ್ಯೂಟರ್, ಟೇಬಲ್, ಚೇರ್ ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ಸೂಚಿಸಲಾಗಿದ್ದು, ಅನುದಾನ ಬಳಕೆ ವಿವರ ಕೆಳಕಂಡಂತಿದೆ. ಅದರಂತೆ ಘಟಕಾಧಿಕಾರಿಗಳು ಅನುದಾನವನ್ನು ಬಳಸಿಕೊಂಡು, ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲಾಗುತ್ತಿದೆ.

| **ಬಿಡುಗಡೆಯಾದ ಅನುದಾನ (ಕೋಟಿಗಳಲ್ಲಿ)** | **ಬಳಕೆಯಾದ ಅನುದಾನ (ಕೋಟಿಗಳಲ್ಲಿ) (ದಿನಾಂಕ : 28/01/2021 ರವರೆಗೆ)** | **ಬಳಕೆಯಾಗಲಿರುವ ಅನುದಾನ (ಕೋಟಿಗಳಲ್ಲಿ)** |
|---|---|---|
| 3.88 | 3.66 | 0.22 |

9. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 100 ಇಎಫ್‌ಎಸ್ 2017 ದಿನಾಂಕ:17.10.2020ರಲ್ಲಿ Emergency Response Support System (ERSS)–112 ಯೋಜನೆಗಾಗಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ರೂ.56.28 ಲಕ್ಷಗಳು ಬಳಕೆ ಮಾಡಲಾಗಿದೆ.

10. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 73 ಪಿಓಪಿ 2019 ದಿನಾಂಕ : 16.01.2021 ರಲ್ಲಿ ಕೇಂದ್ರ ಸರ್ಕಾರವು ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯದ ಡಿ.ಎನ್.ಎ ವಿಭಾಗವನ್ನು ನಿರ್ಭಯ ಯೋಜನೆಯಡಿ ಬಲವರ್ಧನೆಗೊಳಿಸಲು ರೂ.698.00 ಲಕ್ಷಗಳನ್ನು ಘಟಕಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗಿದೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಉತ್ತರ :

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಕೇಂದ್ರ ಸರ್ಕಾರದ ನಿರ್ಭಯ ಯೋಜನೆಯಡಿಯಲ್ಲಿ ಒನ್ ಸ್ಟಾಪ್ ಸೆಂಟರ್(ಸಖಿ) ಯೋಜನೆ ಹಾಗೂ 181 ಮಹಿಳಾ ಸಹಾಯವಾಣಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಒನ್ ಸ್ಟಾಪ್ ಯೋಜನೆಗೆ ಕಟ್ಟಡಗಳ ನಿರ್ಮಾಣ ಮತ್ತು ಕಛೇರಿಯ ಆವರ್ತಕ ಮತ್ತು ಅನಾವರ್ತಕ ವೆಚ್ಚಕ್ಕಾಗಿ ಅನುದಾನವನ್ನು ಕೇಂದ್ರ ಸರ್ಕಾರದಿಂದ ನೇರವಾಗಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಉಪನಿರ್ದೇಶಕರುಗಳ ಜಂಟಿ ಖಾತೆಗೆ ಬಿಡುಗಡೆ ಮಾಡಲಾಗುತ್ತಿದ್ದು, ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲಾಗುತ್ತಿದೆ. ಜಿಲ್ಲಾವಾರು ಅನುದಾನ ಬಿಡುಗಡೆ ಮತ್ತು ಖರ್ಚಿನ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.

| | | |
|---|---|---|
| (ಇ) | ಈ ಅನುದಾನವನ್ನು ಸದ್ಬಳಕೆ ಮಾಡದೇ ಕೇಂದ್ರ ಸರ್ಕಾರಕ್ಕೆ ಹಿಂತಿರುಗಿಸಿರುವ ಪ್ರಕರಣಗಳು ಯಾವುದು ಮತ್ತು ಅಂತಹ ನಿರ್ಲಕ್ಷ್ಯತೆ ತೋರಿರುವ ಇಲಾಖಾ ಮುಖ್ಯಸ್ಥರ ಮತ್ತು ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರವನ್ನು ನೀಡುವುದು). | **ಒಳಾಡಳಿತ ಇಲಾಖೆ** ಹಾಗೂ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ** ಇಲಾಖೆಗಳಲ್ಲಿ ಅನುದಾನವನ್ನು ಕೇಂದ್ರ ಸರ್ಕಾರಕ್ಕೆ ಹಿಂದಿರುಗಿಸಿರುವ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |

ಹೆಚ್‌ಡಿ 62 ಎಸ್‌ಎಸ್‌ಟಿ 2021

**(ಬಸವರಾಜ ಬೊಮ್ಮಾಯಿ)**
ಗೃಹ ಸಚಿವರು

## ಅನುಬಂಧ - ೫

ಕೇಂದ್ರ ಸರ್ಕಾರದಿಂದ 5 ವರ್ಷಗಳಲ್ಲಿ ಒನ್ ಸ್ಟಾಪ್ ಸೆಂಟರ್(ಸಖಿ) ಯೋಜನೆಗೆ ಬಿಡುಗಡೆಯಾದ ಅನುದಾನ ಮತ್ತು ಖರ್ಚಿನ ವಿವರ (22 ಜನವರಿ 2021ರ ಅಂತ್ಯಕ್ಕೆ)

ರೂ ಲಕ್ಷಗಳಲ್ಲಿ

| ಕ್ರ ಸಂ | ಜಿಲ್ಲೆಗಳ ಹೆಸರು | 2015-16 | | 2016-17 | | 2017-18 | | 2018-19 | | 2019-20 | | 2020-21 | | ಪ್ರಸ್ತುತ ಇರುವ ಒಟ್ಟು ಉಳಿಕೆ ಅನುದಾನ (ರೂ.ಲಕ್ಷಗಳಲ್ಲಿ) | ಅನುದಾನ ಉಳಿಕೆಯಾಗಲು ಕಾರಣ |
|---|---|---|---|---|---|---|---|---|---|---|---|---|---|---|---|
| | | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | | |
| 1 | ಬಾಗಲಕೋಟೆ | 0 | 0 | 0 | 0 | 20.91 | 0 | 0.5 | 0 | 24.34 | 0 | 7.5 | 31.69 | 21.56 | ಸದರಿ ಉಳಿಕೆ ಮೊತ್ತದಲ್ಲಿ 2017-18ರಲ್ಲಿ ಬಿಡುಗಡೆಯಾದ Refurbishment of existing facility ಗೆ ಬಿಡುಗಡೆಯಾದ ರೂ. 10.0 ಲಕ್ಷ, OSC ಗೆ ಕಂಪ್ಯೂಟರ್ refrigarator ಹಾಗೂ ಇತರೆ ಸಾಮಗ್ರಿಗಳ ಖರೀದಿಗಾಗಿ ಬಿಡುಗಡೆಯಾದ 2.41 ಲಕ್ಷ ಹಾಗೂ OSC ಯ ಸಿಬ್ಬಂದಿ ವೇತನ ಪಾವತಿಗಾಗಿ ಬಿಡುಗಡೆಯಾದ ರೂ. 6.0 ಲಕ್ಷ ಹಾಗೂ ನಿರ್ವಹಣಾ ವೆಚ್ಚಕ್ಕಾಗಿ ಬಿಡುಗಡೆಯಾದ ರೂ. 1.02 ಲಕ್ಷ ಸೇರಿದಂತೆ 2017-18ರಲ್ಲಿ ಬಿಡುಗಡೆಯಾದ ಅನುದಾನ ಹಾಗೂ 2018-19ರಲ್ಲಿ ನಿರ್ವಹಣೆಗಾಗಿ ಬಿಡುಗಡೆಯಾದ ರೂ. 0.5 ಲಕ್ಷಗಳು ಸೇರಿವೆ 2017-18 ರಲ್ಲಿ ಸಖಿ ಕೇಂದ್ರಕ್ಕೆ ಪ್ರತ್ಯೇಕವಾಗಿ ಸಿಬ್ಬಂದಿ ನೇಮಕಾತಿ ಯಾಗದೇ ಇದ್ದ ಪ್ರಯುಕ್ತ ಗೆಳತಿ ವಿಶೇಷ ಚಿಕಿತ್ಸಾ ಘಟಕದೊಂದಿಗೆ ಸಖಿ ಕೇಂದ್ರವು ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿತ್ತು ಹೀಗಾಗಿ Refurbishment of existing facility ಗೆ ಬಿಡುಗಡೆಯಾದ ಅನುದಾನ ಹಾಗೂ ಸಿಬ್ಬಂದಿ ವೇತನಕ್ಕಾಗಿ ಬಿಡುಗಡೆಯಾದ ಅನುದಾನ ವೆಚ್ಚವಾಗಿಲ್ಲ. ಕಂಪ್ಯೂಟರ್ ಸೇರಿದಂತೆ ವಿವಿಧ ಸಾಮಗ್ರಿಗಳನ್ನು ಗೆಳತಿ ಚಿಕಿತ್ಸಾ ಘಟಕದಲ್ಲಿ ಖರೀದಿಸಿದ್ದರಿಂದ ಅನುದಾನ ಉಳಿಕೆಯಾಗಿರುತ್ತದೆ. |
| 2 | ಬೆಂಗಳೂರು (ಗ್ರಾ) | 0 | 0 | 0 | 0 | 0 | 0 | 36.25 | 0 | 15 | 24.34 | 7.5 | 1.31 | 33.10 | ಸಖಿ ಕಟ್ಟಡ ನಿರ್ಮಾಣ ಹಂತದಲ್ಲಿದ್ದು ಹಾಗೂ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಪಸ್ತುತ ಮಾಹೆಯಲ್ಲಿ ಅಂತಿಮಗೊಂಡಿರುವುದರಿಂದ ಆವರ್ತಕ ಮತ್ತು ಅನಾವರ್ತಕ ವೆಚ್ಚ ಉಳಿಕೆಯಾಗಿರುತ್ತದೆ. |
| 3 | ಬೆಂಗಳೂರು (ನ) | 0 | 0 | 0 | 0 | 0 | 0 | 0 | | 34.99 | 20.03 | 5 | 3.22 | 16.74 | ಸಖಿ ಕಟ್ಟಡ ನಿರ್ಮಾಣಕ್ಕೆ 19 ಲಕ್ಷ ರೂ ಬಿಡುಗಡೆಯಾಗಿರುತ್ತದೆ. ಅಪರ ಮುಖ್ಯ ಕಾರ್ಯದರ್ಶಿಗಳ ಆದೇಶದಂತೆ ಪಾಯ ಹಂತದಲ್ಲಿಯೇ ಕಟ್ಟಡ ನಿರ್ಮಾಣ ಸ್ಥಗಿತಗೊಂಡಿರುತ್ತದೆ. ಉಳಿದ ಅನುದಾನವೂ ಸಖಿ ಸಿಬ್ಬಂದಿಗಳ ಗೌರವಧನಕ್ಕೆ ವೆಚ್ಚವಾಗಿರುತ್ತದೆ. |
| 4 | ಬೆಳಗಾವಿ | 0 | 0 | 0 | 0 | 0 | 0 | 0 | 0 | 38.25 | 18.84 | 5 | 0.27 | 24.14 | ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಯಲ್ಲಿದೆ. ಪಿಠೋಪಕರಣಗಳನ್ನು ಖರೀದಿಸಬೇಕಾಗಿದೆ. |
| 5 | ಬಳ್ಳಾರಿ | 0 | 0 | 0 | 0 | 0 | 0 | 25.75 | 0 | 33.84 | 36.02 | 7.5 | 23.33 | 7.74 | ಸದರಿ ಅನುದಾನವು ತರಬೇತಿ ಕಾರ್ಯಕ್ರಮ ಹಾಗೂ ಇತರ ವೆಚ್ಚಗಳ ಮೊತ್ತವಾಗಿರುತ್ತದೆ. |
| 6 | ಬೀದರ್ | 0 | 0 | 0 | 0 | 0 | 0 | 0 | 0 | 43.76 | 3.02 | 7.5 | 13.31 | 34.93 | 2020-21ನೇ ಸಾಲಿನಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ನಿವೇಶನ ದೊರಕಿದ್ದು, ಸದರಿ ಕಟ್ಟಡ ಕಾಮಗಾರಿಯನ್ನು ಅತೀ ಶೀಘ್ರದಲ್ಲಿ ಪ್ರಾರಂಭಿಸಲಾಗುವುದು. ಒನ್ ಸ್ಟಾಪ್ ಸೆಂಟರ್ ಸಿಬ್ಬಂದಿಗಳ ಗೌರವಧನ ಪ್ರಕ್ರಿಯೆಗಳಲ್ಲಿದೆ. |
| 7 | ವಿಜಾಪುರ | 0 | 0 | 0 | 0 | 0 | 0 | 0 | 0 | 4.8 | 4.8 | 7.5 | 6.95 | 0.55 | ಉಳಿಕೆ ಅನುದಾನವನ್ನು 0.55 ರೂ ಗಳ ಅನುದಾನವನ್ನು ತರಬೇತಿ ಕಾರ್ಯಕ್ರಮ ಹಾಗೂ ಲೇಖನ ಸಾಮಗ್ರಿಗಳ ಖರೀದಿಸಿ ಮಾರ್ಚ 2021 ರೊಳಗಾಗಿ ವೆಚ್ಚ ಭರಿಸಲಾಗುವುದು. |
| 8 | ಚಾಮರಾಜನಗರ | 0 | 0 | 28.41 | 0 | 0 | 0 | 0 | 14.2 | 24.34 | 21.8 | 5 | 4.45 | 17.30 | ಸಖಿ ಕೇಂದ್ರದ ಕಟ್ಟಡ ನಿರ್ಮಾಣ ಪೂರ್ಣಗೊಳ್ಳದ ಕಾರಣ |
| 9 | ಚಿಕ್ಕಮಗಳೂರು | 0 | 0 | 0 | 0 | 0 | 0 | 32.31 | 0 | 15 | 28.21 | 7.5 | 13.23 | 13.37 | ಒನ್ ಸ್ಟಾಪ್ ಸೆಂಟರ್ ಸ್ವಂತ ಕಟ್ಟಡ ಕಾಮಗಾರಿ ನಿರ್ಮಾಣ ಹಂತದಲ್ಲಿದ್ದು, ಸಾದಿಲ್ವಾರು ವೆಚ್ಚಕ್ಕಾಗಿ ಬಿಡುಗಡೆಯಾದ ಮೊತ್ತವನ್ನು ಭರಿಸಲಾಗಿರುವುದಿಲ್ಲ. ಪ್ರಸ್ತುತ ಮಾರ್ಚ್-2021 ರೊಳಗೆ ವೆಚ್ಚಭರಿಸಲಾಗುವುದು. |
| 10 | ಚಿಕ್ಕಬಳ್ಳಾಪುರ | 0 | 0 | 0 | 0 | 0 | 0 | 36.25 | 24.34 | 15 | 1.52 | 5 | 1.7 | 28.69 | ಒನ್ ಸ್ಟಾಪ್ ಸೆಂಟರ್ ಸ್ವಂತ ಕಟ್ಟಡ ಕಾಮಗಾರಿ ನಿರ್ಮಾಣ ಹಂತದಲ್ಲಿದ್ದು, ಸದರಿ ಯೋಜನೆಯ ಸಿಬ್ಬಂದಿ ನೇಮಕಾತಿ ದಿನಾಂಕ:18.01.2021ರಂದು ಆಗಿರುವುದರಿಂದ ಸಿಬ್ಬಂದಿಯ ಗೌರವಧನ ಹಾಗೂ ಸಾದಿಲ್ವಾರು ವೆಚ್ಚವನ್ನು ಭರಿಸಲಾಗಿರುವುದಿಲ್ಲ. |
| 11 | ಚಿತ್ರದುರ್ಗ | 0 | 0 | 0 | 0 | 28.41 | 28.4 | 0.5 | 0 | 24.34 | 24.15 | 7.5 | 5.1 | 3.10 | ಸದರಿ ಉಳಿಕೆ ಮೊತ್ತವು 2018-19ನೇ ಸಾಲಿನಲ್ಲಿ ಬಿಡುಗಡೆಯಾದ ಸಂಕಷ್ಟದಲ್ಲಿರುವ ಮಹಿಳೆಯರಿಗೆ ತುರ್ತು ನೆರವು ಅನುದಾನ ಹಾಗೂ ಸಿಬ್ಬಂದಿಗಳ ಗೌರವಧನ ಪ್ರಯಾಣ ಭತ್ಯೆ ವಿದ್ಯುತ್ ಬಿಲ್ ಪಾವತಿ ಹಾಗೂ ಲೇಖನ ಸಾಮಗ್ರಿ ಖರೀದಿಗೆ ಸಂಬಂಧಿಸಿದ್ದಾಗಿರುತ್ತದೆ. |

| ಕ್ರ ಸಂ | ಜಿಲ್ಲೆಗಳ ಹೆಸರು | 2015-16 | | 2016-17 | | 2017-18 | | 2018-19 | | 2019-20 | | 2020-21 | | ಪ್ರಸ್ತುತ ಇರುವ ಒಟ್ಟು ಉಳಿಕೆ ಅನುದಾನ (ರೂ.ಲಕ್ಷಗಳಲ್ಲಿ) | ಅನುದಾನ ಉಳಿಕೆಯಾಗಲು ಕಾರಣ |
|---|---|---|---|---|---|---|---|---|---|---|---|---|---|---|---|
| | | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | | |
| 12 | ದಕ್ಷಿಣಕನ್ನಡ | 0 | 0 | 0 | 0 | 0 | 0 | 31.25 | 0 | 15 | 34.78 | 7.5 | 9.23 | 9.74 | ಸಖಿ ಕೇಂದ್ರಕ್ಕೆ 2018-19 ನೇ ಸಾಲಿನ ಅನುದಾನ ಮಾರ್ಚ್ 2019 ರ ಆರ್ಥಿಕ ವರ್ಷದ ಅಂತ್ಯಕ್ಕೆ ಬಿಡುಗಡೆಯಾಗಿರುವುದರಿಂದ ಸದರಿ ವರ್ಷದಲ್ಲಿ ಅನುದಾನ ವೆಚ್ಚ ಭರಿಸಲು ಸಾಧ್ಯವಾಗಿರುವುದಿಲ್ಲ. ಕೇಂದ್ರಕ್ಕೆ ಸಿಬ್ಬಂದಿಗಳನ್ನು ಮಾರ್ಚ್ -2020ರಲ್ಲಿ ನೇಮಕಾತಿ ಮಾಡಿರುವುದರಿಂದ, ಸಿಬ್ಬಂದಿಗಳ ಗೌರವಧನ ಮೊತ್ತ ಉಳಿಕೆಯಾಗಿರುತ್ತದೆ. ಲೇಖನ ಸಾಮಗ್ರಿಗಳನ್ನು ಅವಶ್ಯ ವಿದ್ದಷ್ಟು ಮಾತ್ರ ಖರೀದಿಸಲಾಗುತ್ತಿದೆ. ಟೆಲಿಫೋನ್ ಬಿಲ್ಲನ್ನು ಬಿಲ್ಲಿನ ಅನುಸಾರ ಪಾವತಿಸಲಾಗುತ್ತಿದೆ. ಈ ಎಲ್ಲಾ ಕಾರಣಗಳಿಂದ ಅನುದಾನ ಉಳಿಕೆಯಾಗಿರುತ್ತದೆ. ಉಳಿಕೆ ಅನುದಾನವನ್ನು 2020-21ನೇ ಸಾಲಿನಲ್ಲಿ ಅವಶ್ಯಕತೆಗನುಸಾರ ವೆಚ್ಚ ಮಾಡಲಾಗುತ್ತಿದೆ. (2018-19 & 2019-20 ಉಳಿಕೆ ಅನುದಾನದಿಂದ ರೂ.2.04 ವನ್ನು 2020-21 ನೇ ಸಾಲಿನಲ್ಲಿ ಸಿಬ್ಬಂದಿಗಳ ಗೌರವಧನ ಪಾವತಿಸಲು ಉಪಯೋಗಿಸಲಾಗಿದೆ.) 2018-19 ರ ಆರ್ಥಿಕ ವರ್ಷದ ಅಂತ್ಯದಲ್ಲಿ ಅನುದಾನ ಬಿಡುಗಡೆಯಾದ ಕಾರಣ ಖರ್ಚು ಭರಿಸಿರುವುದಿಲ್ಲ. (2018-19,2019-20 & 2020-21ರ ಸಾಲಿನ ಒಟ್ಟು ಉಳಿಕೆ ಅನುದಾನ) |
| 13 | ದಾವಣಗೆರೆ | 0 | 0 | 0 | 0 | 0 | 0 | 33.41 | 25.91 | 15 | 0 | 29 | 29.52 | 21.98 | ಉಳಿದ ಅನುದಾನವು ಇತರ ವೆಚ್ಚಗಳ ಮೊತ್ತವಾಗಿರುತ್ತದೆ. ಸದರಿ ಅನುದಾನವನ್ನು 2020-21ನೇ ಸಾಲಿನಲ್ಲಿ ಖರ್ಚು ಭರಿಸಲಾಗುವುದು. |
| 14 | ಧಾರವಾಡ | 0 | 0 | 0 | 0 | 28.41 | 14 | 0.5 | 14.3 | 24.34 | 0 | 7.5 | 25.61 | 6.84 | ಬಡ್ಡಿ ಹಣ ಮತ್ತು ಸಾದಿಲ್ವಾರು ವೆಚ್ಚ, ಉಳಿಕೆ |
| 15 | ಗದಗ | 0 | 0 | 0 | 0 | 0 | 0 | 36.25 | 24.34 | 15 | 5.82 | 7.5 | 19.15 | 9.44 | ಸಿಬ್ಬಂದಿ ಗೌರವಧನ, ಅನಾವರ್ತಕ ವೆಚ್ಚಗಳು ಮತ್ತು ಸಾದಿಲ್ವಾರು ವೆಚ್ಚ ಬಾಕಿ ಇರುತ್ತದೆ. ಸದರಿ ಅನುದಾನವನ್ನು 2020-21ನೇ ಸಾಲಿಗೆ ಖರ್ಚು ಭರಿಸಲಾಗುವುದು. |
| 16 | ಗುಲ್ಬರ್ಗಾ | 0 | 0 | 0 | 0 | 0 | 0 | 29.41 | 0 | 15.01 | 17.5 | 22.36 | 28.76 | 20.52 | ಸಖಿ ಒನ್ ಸ್ಟಾಪ್ ಸೆಂಟರ್ ಗೆ ಅವಶ್ಯಕತೆ ಇರುವ ಪೀಠೋಪಕರಣ ಮತ್ತು ಪಾಕೋಪಕರಣ ಗಳನ್ನು ಖರೀದಿಸುವ ಟೆಂಡರ್ ಪ್ರಕ್ರಿಯ ಜಾರಿಯಲ್ಲಿರುವುದರಿಂದ ಅನುದಾನ ಉಳಿಕೆಯಾಗಿರುತ್ತದೆ. |
| 17 | ಹಾಸನ | 0 | 0 | 0 | 0 | 0 | 0 | 11.91 | 0 | 15 | 2.98 | 7.5 | 3.72 | 27.71 | ಪ್ರಸ್ತುತ ಸಖಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರು ಸಿಬ್ಬಂದಿಗಳಿಗೆ ವಿಶೇಷ ಚಿಕಿತ್ಸಾಘಟಕದಲ್ಲಿ ನಿಗಧಿಯಾದ ಗೌರವಧನವನ್ನು ನೀಡಲಾಗುತ್ತಿದೆ. |
| 18 | ಹಾವೇರಿ | 0 | 0 | 0 | 0 | 0 | 0 | 36.26 | 24.34 | 15.04 | 0 | 31.84 | 11.92 | 46.88 | ಖರ್ಚು-ಕಟ್ಟಡ ನಿರ್ಮಾಣದ ಮೊದಲಕಂತು-24.34 ಸಿಬ್ಬಂದಿ ಗೌರವಧನ-11.92 ಉಳಿಕೆ ಕಟ್ಟಡ ನಿರ್ಮಾಣದ ಎರಡನೇ ಕಂತು- 24.34ಲಕ್ಷ( 13-01-2021 ಕ್ಕೆ ಜಮಾ ಆಗಿದೆ.) ನಿರ್ಮಿತಿ ಕೇಂದ್ರಕ್ಕೆ ಕೊಡಲು ಬಾಕಿ ಮತ್ತು 22.64 ಲಕ್ಷ 2018-19 & 2019-20 ರಲ್ಲಿ ಸಿಬ್ಬಂದಿ ನೇಮಕಾತಿ ಆಗದೇ ಉಳಿಕೆ ಮೊತ್ತ. |
| 19 | ಕೊಡಗು | 0 | 0 | 0 | 0 | 0 | 0 | 30.46 | 0 | 15 | 20.27 | 7.5 | 17.30 | 15.39 | ಸಖಿ ಒನ್ ಸ್ಟಾಪ್ ಸೆಂಟರ್ ಕಟ್ಟಡ ಕಾಮಗಾರಿಗೆ ಮೊದಲ ಕಂತಿನ ಅನುದಾನ ರೂ. 19.56 ಲಕ್ಷ ಬಿಡುಗಡೆಯಾಗಿದ್ದು, ಬ್ಯಾಸ್ಮೆಂಟ್ ಕಾರ್ಯ ಮುಗಿದಿದ್ದು, ಅನುದಾನದ ಕೊರತೆಯಿಂದ ಕಟ್ಟಡ ಕಾಮಗಾರಿ ಸ್ಥಗಿತಗೊಂಡಿರುತ್ತದೆ. ಆದ್ದರಿಂದ ಕಚೇರಿಗೆ ಬೇಕಾದ ಪೀಠೋಪಕರಣ ಮತ್ತು ಯಂತ್ರೋಪಕರಣಗಳನ್ನು ಖರೀದಿಸಿರುವುದಿಲ್ಲ. ಇದರಿಂದಾಗಿ ಪೀಠೋಪಕರಣ ಮತ್ತು ಯಂತ್ರೋಪಕರಣ ಖರೀದಿ ಮತ್ತು ಕಟ್ಟಡ ನಿರ್ಮಾಣ ಅನುದಾನ ರೂ. 11.81 ಲಕ್ಷ ಮತ್ತು ಸಿಬ್ಬಂದಿಗಳ ಗೌರವಧನ ಅನುದಾನ ರೂ. 5.00 ಲಕ್ಷ ಮತ್ತು ಬ್ಯಾಂಕ್ ಬಡ್ಡಿ ಸೇರಿದಂತೆ ಒಟ್ಟು ರೂ. 17.42 ಲಕ್ಷ ಉಳಿಕೆ ಇರುತ್ತದೆ. |
| 20 | ಕೋಲಾರ | 0 | 0 | 0 | 0 | 0 | 0 | 33.75 | 0 | 15 | 30 | 31.84 | 4.28 | 46.31 | ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾಗಿರುವ ರೂ.24.34 ಲಕ್ಷ 2 ನೇ ಕಂತಿನ ಅನುದಾನವನ್ನು ನಿರ್ಮಿತಿ ಕೇಂದ್ರ ಕೋಲಾರ ರವರಿಗೆ ಪಾವತಿಸಲು ಚೆಕ್ ನ್ನು ಸಿದ್ಧಪಡಿಸಿ ಜಿಲ್ಲಾಧಿಕಾರಿಗಳವರ ಅನುಮೋದನೆಗಾಗಿ ಕಡತವನ್ನು ಜಿಲ್ಲಾಧಿಕಾರಿಗಳವರಿಗೆ ಮಂಡಿಸಿದೆ. ಸರಿಯಾದ ತಜ್ಞರ ಕಾಮಗಾರಿಯು 2 ನೇ ಕಂತಿನ ಅನುದಾನವನ್ನು ಪಾವತಿಸಲಾಗುವುದು. ಪ್ರಸ್ತುತ ಸಖಿ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಗುತ್ತಿ ಚಿಕಿತ್ಸಾ ಘಟಕದ ಗೌರವಧನದ ಆಧಾರದ ಮೇಲೆ ಪಾವತಿಸಲಾಗುತ್ತಿದೆ. |
| 21 | ಕೊಪ್ಪಳ | 0 | 0 | 3.03 | 3.03 | 7.87 | 5.6 | 11 | 7.81 | 4.71 | 3.45 | 5 | 4.27 | 7.45 | ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾಗಿರುವ ರೂ.24.34 ಲಕ್ಷ 2 ನೇ ಕಂತಿನ ಅನುದಾನವನ್ನು ನಿರ್ಮಿತಿ ಕೇಂದ್ರ ಕೋಲಾರ ರವರಿಗೆ ಪಾವತಿಸಲು ಚೆಕ್ ನ್ನು ಸಿದ್ಧಪಡಿಸಿ ಜಿಲ್ಲಾಧಿಕಾರಿಗಳವರ ಅನುಮೋದನೆಗಾಗಿ ಕಡತವನ್ನು ಜಿಲ್ಲಾಧಿಕಾರಿಗಳವರಿಗೆ ಮಂಡಿಸಿದೆ. ಸರಿಯಾದ ತಜ್ಞರ ಕಾಮಗಾರಿಯು 2 ನೇ ಕಂತಿನ ಅನುದಾನವನ್ನು ಪಾವತಿಸಲಾಗುವುದು. ಪ್ರಸ್ತುತ ಸಖಿ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಗುತ್ತಿ ಚಿಕಿತ್ಸಾ ಘಟಕದ ಗೌರವಧನದ ಆಧಾರದ ಮೇಲೆ ಪಾವತಿಸಲಾಗುತ್ತಿದೆ. |

| ಕ್ರ ಸಂ | ಜಿಲ್ಲೆಗಳ ಹೆಸರು | 2015-16 | | 2016-17 | | 2017-18 | | 2018-19 | | 2019-20 | | 2020-21 | | ಪ್ರಸ್ತುತ ಇರುವ ಒಟ್ಟು ಉಳಿಕೆ ಅನುದಾನ (ರೂ.ಲಕ್ಷಗಳಲ್ಲಿ) | ಅನುದಾನ ಉಳಿಕೆಯಾಗಲು ಕಾರಣ |
|---|---|---|---|---|---|---|---|---|---|---|---|---|---|---|---|
| | | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | | |
| 22 | ಮಂಡ್ಯ | 0.00 | 0.00 | 0.00 | 0.00 | 0.00 | 0.00 | 30.91 | 0.00 | 15.00 | 19.00 | 26.50 | 31.60 | 21.81 | ಪ್ರಸ್ತುತ ಒನ್ ಸ್ಟಾಪ್ ಸೆಂಟರ್ ಕೇಂದ್ರವು ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ, ಕಟ್ಟಡ ಬಾಡಿಗೆ, ಟೆಲಿಫೋನ್ ಬಿಲ್ಲಿನ ಮೊತ್ತ, ಇಂಟರ್ ನೆಟ್ ವೆಚ್ಚ, ಸಿ.ಸಿ. ಕ್ಯಾಮರ ಖರೀದಿ ವೆಚ್ಚಗಳಿಗಾಗಿ ಬಿಡುಗಡೆಯಾಗಿದ್ದ ಅನುದಾನ ಉಳಿದಿರುತ್ತದೆ. |
| 23 | ಮೈಸೂರು | 0.00 | 0.00 | 0.00 | 0.00 | 20.91 | 0.00 | 0.50 | 4.13 | 24.34 | 1.77 | 7.50 | 39.36 | 7.99 | 2017-18ನೇ ಸಾಲಿನಲ್ಲಿ ಸಖಿ ಕೇಂದ್ರಕ್ಕೆ ಪ್ರತ್ಯೇಕವಾಗಿ ಸಿಬ್ಬಂದಿ ನೇಮಕಾತಿಯಾಗದೇ ಇದ್ದ ಪ್ರಯುಕ್ತ ಗೆಳತಿ ವಿಶೇಷ ಚಿಕಿತ್ಸಾ ಘಟಕದ ಸಿಬ್ಬಂದಿಯವರುಗಳೆ ಸಖಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರ ಗೌರವಧನವನ್ನು ಗೆಳತಿ ವಿಶೇಷ ಚಿಕಿತ್ಸಾ ಘಟಕದ ಅನುದಾನದಿಂದ ಪಾವತಿಸಿರುವುದರಿಂದ ಉಳಿಕೆಯಾಗಿರುತ್ತದೆ. |
| 24 | ರಾಯಚೂರು | 0.00 | 0.00 | 0.00 | 0.00 | 0.00 | 0.00 | 29.08 | 6.91 | 15.01 | 17.51 | 5.00 | 11.30 | 13.37 | 13.37 ಉಳಿಕೆನಲ್ಲಿ 10.37 ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆಯಾಗಿದ್ದು ಕಟ್ಟಡ ಇನ್ನು ಪ್ರಾರಂಭಿಸಿಲ್ಲ . ರೂ.3.00 ಅನುದಾನ ಗೌರವಧನ ಬಾಕಿಯಿರುತ್ತದೆ ಮುಂದಿನದಿನದಲ್ಲಿ ಖರ್ಚು ಭರಿಸಲಾಗಿದೆ. |
| 25 | ರಾಮನಗರ | 0.00 | 0.00 | 0.00 | 0.00 | 0.00 | 0.00 | 11.91 | 0.00 | 15.01 | 0.00 | 0.00 | 17.04 | 9.88 | ಸಿಬ್ಬಂದಿ ಗೌರವಧನ ಬಾಕಿ ಇರುತ್ತದೆ. ಹಾಗೂ ಕಾನೂನು ಸಲಹೆಗಾರರ ನೇಮಕಾತಿ ಪ್ರಗತಿಯಲ್ಲಿರುತ್ತದೆ |
| 26 | ಶಿವಮೊಗ್ಗ | 0.00 | 0.00 | 0.00 | 0.00 | 0.00 | 0.00 | 26.11 | 0.00 | 0.00 | 1.92 | 5.00 | 7.94 | 21.25 | ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾದ ಅನುದಾನ ಹಾಗೂ ನಾನ್ ರಿಕರಿಂಗ್ ಅನುದಾನ ವೆಚ್ಚ ಭರಿಸುವುದು ಬಾಕಿ ಇದೆ. ವೆಚ್ಚ ಭರಿಸಲು ಕ್ರಮವಹಿಸಲಾಗಿದೆ. |
| 27 | ತುಮಕೂರು | 0.00 | 0.00 | 0.00 | 0.00 | 20.91 | 0.00 | 0.50 | 0.00 | 24.34 | 0.00 | 7.50 | 5.56 | 47.69 | ಕಟ್ಟಡ ನಿರ್ಮಾಣ ಕಾಮಗಾರಿಗೆ ರೂ.24.34 ಲಕ್ಷ ಮತ್ತು ಅಟ್ಯಾಚ್ಡ್ ಸೌಲಭ್ಯ ಒದಗಿಸಲುರೂ.21.91 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಪಿ.ಆರ್.ಇ.ಡಿ ಅವರಿಂದ ಕಟ್ಟಡ ಕಾಮಗಾರಿ ಪ್ರಾರಂಭವಾಗಿದ್ದು, ಆರ್.ಸಿ.ಸಿ ಹಂತದಲ್ಲಿರುತ್ತದೆ. ಶೀಘ್ರದಲ್ಲೇ ಸದರಿಯವರಿಗೆ ಅನುದಾನ ಪಾವತಿಸಲಾಗುವುದು. ಸಖಿ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ಗೌರವಧನ ಪಾವತಿಸಿಗೆ ರೂ.5.58 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ. |
| 28 | ಉಡುಪಿ | 45.87 | 45.87 | 0.00 | 0.00 | 0.00 | 0.00 | 0.00 | 0.00 | 0.00 | 0.00 | 19.71 | 10.71 | 9.00 | ಸದರಿ ಉಳಿಕೆ ಮೊತ್ತವು ಸಿಬ್ಬಂದಿಗಳ ಗೌರವಧನ ಪ್ರಯಾಣ ಭತ್ಯೆ, ವಿದ್ಯುತ್ ಬಿಲ್ ಪಾವತಿ ಹಾಗೂ ಲೇಖನ ಸಾಮಗ್ರಿ ಖರೀದಿಗೆ ಸಂಬಂಧಿಸಿದ್ದಾಗಿರುತ್ತದೆ. |
| 29 | ಉತ್ತರಕನ್ನಡ | 0.00 | 0.00 | 0.00 | 0.00 | 0.00 | 0.00 | 29.38 | 0.00 | 15.00 | 16.86 | 7.50 | 9.82 | 25.20 | ಸಖಿ ಘಟಕವು ಡಿಸೆಂಬರ್-2019 ರಿಂದ ಕಾರ್ಯರೂಪಕ್ಕೆ ಬಂದಿದ್ದು, ಹಾಗೂ ಸಿಬ್ಬಂದಿ ನೇಮಕಾತಿ ಪೂರ್ಣಗೊಂಡಿರುವುದಿಲ್ಲ. ಕಾರಣ ಅನುದಾನವು ಉಳಿಕೆಯಾಗಿರುತ್ತದೆ. |
| 30 | ಯಾದಗಿರಿ | 0.00 | 0.00 | 0.00 | 0.00 | 0.00 | 0.00 | 30.76 | 18.85 | 15.00 | 0.00 | 7.50 | 4.42 | 29.99 | ಸಖಿ ಘಟಕವು ಡಿಸೆಂಬರ್-2019 ರಿಂದ ಕಾರ್ಯರೂಪಕ್ಕೆ ಬಂದಿದ್ದು,, ಕಟ್ಟಡ ಹಾಗು ಸಿಬ್ಬಂದಿ ನೇಮಕಾತಿ ಪೂರ್ಣಗೊಂಡಿರುವುದಿಲ್ಲ. ಕಾರಣ ಕಛೇರಿ ಸಾಮಾಗ್ರಿಗಳನ್ನು ಖರೀದಿಸಿರುವುದಿಲ್ಲ.ಹಾಗು ಸಿಬ್ಬಂದಿಗಳಿಗೆ ಗೆಳತಿ ವಿಶೇಷ ಘಟಕದ ದರದಲ್ಲಿಯೇ ವೇತನ ನೀಡಲಾಗುತ್ತಿದೆ. ಕಾರಣ ಅನುದಾನ ಉಳಿಕೆಯಾಗಿರುತ್ತದೆ. |
| | ಒಟ್ಟು | 45.87 | 45.87 | 31.44 | 3.03 | 127.42 | 48 | 544.91 | 165.13 | 546.46 | 354.59 | 316.25 | 396.07 | 599.66 | |